# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ : M/s Karad Wind India Private Limited ಇವರಿಗೆ ಚಿತ್ರದುರ್ಗ ಜಿಲ್ಲೆಯ, ಚಿತ್ರದುರ್ಗ ಮತ್ತು ಹಿರಿಯೂರು ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ 11 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಕುರಿತು.

**ಓದಲಾಗಿದೆ :**

1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರ ಪತ್ರ ಸಂಖ್ಯೆ:KREDL/08/ KWIPL-11 MW/Chitradurga/F-107/2022/0216, ದಿನಾಂಕ: 19.01.2023.
2) ದಿನಾಂಕ:21.01.2023 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿ.
3) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:15113/2022 (GM-RES)

ಸಂ. 553
ದಿನಾಂಕ 9/2/23
ಬೆಂಗಳೂರು

**ಪ್ರಸ್ತಾವನೆ :-**

ಮೇಲೆ ಓದಲಾದ (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್.ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s Karad Wind India Private Limited ಇವರಿಗೆ ಚಿತ್ರದುರ್ಗ ಜಿಲ್ಲೆಯ, ಚಿತ್ರದುರ್ಗ ಮತ್ತು ಹಿರಿಯೂರು ತಾಲ್ಲೂಕುಗಳ ದೊಡ್ಡಸಿದ್ದವ್ವನಹಳ್ಳಿ, ಪಲ್ಲವನಹಳ್ಳಿ ಮತ್ತು ಕುರುಮರ್ಡಿಕೆರೆ ಗ್ರಾಮಗಳಲ್ಲಿ 11 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕೆ.ಆರ್.ಇ.ಡಿ.ಎಲ್. ನಿಯಮಿತಕ್ಕೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮುಖಾಂತರ ಸ್ವಂತ ಬಳಕೆಗೆ/ಮೂರನೇ ವ್ಯಕ್ತಿಗೆ ಮಾರಾಟ ಮಾಡುವ ವರ್ಗದಡಿ ಪ್ರತಿ ವಿಂಡ್ ಟರ್ಬೈನ್‌ಗೆ 4 ಎಕರೆಯಂತೆ Footprint basis ಲೆಕ್ಕೀಕರಿಸಿ, ಜಮೀನುಗಳನ್ನು ಉಪಯೋಗಿಸುವುದು ಮತ್ತು ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ಮಾರ್ಗಸೂಚಿಯಂತೆ ಅಳವಡಿಸುವಂತೆ ಷರತ್ತುಗಳನ್ನು ವಿಧಿಸಿ, ಹಂಚಿಕೆ ನೀಡುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, M/s Karad Wind India Private Limited ಇವರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿಯವರು 11 ಮೆ.ವ್ಯಾ. ಸಾಮರ್ಥ್ಯಕ್ಕೆ 2 ಮೆ.ವ್ಯಾ. ಸಾಮರ್ಥ್ಯದ 3 ವಿಂಡ್ ಟರ್ಬೈನ್, 1.25 ಸಾಮರ್ಥ್ಯದ 2 ವಿಂಡ್ ಟರ್ಬೈನ್ ಹಾಗೂ 0.6 ಮೆ.ವ್ಯಾ. ಸಾಮರ್ಥ್ಯದ 4 ವಿಂಡ್ ಟರ್ಬೈನ್‌ಗಳನ್ನು ಅಳವಡಿಸುತ್ತಿದ್ದು, ಪ್ರತಿ ಟರ್ಬೈನ್‌ಗೆ 04 ಎಕರೆಯಂತೆ ಲೆಕ್ಕೀಕರಿಸಿ ಒಟ್ಟು 36 ಎಕರೆ (9 Nos of WTG x 4 Acres = 36 Acres) ಜಮೀನನ್ನು ಮಾತ್ರ ಟೋಪೋಶೀಟ್ ಸಂಖ್ಯೆ:57 B/8 ರಲ್ಲಿ ಉಪಯೋಗಿಸಿಕೊಳ್ಳಬಹುದಾಗಿದೆ ಹಾಗೂ ಸದರಿಯವರು ಕೋರಿರುವ ಸ್ಥಳವು ಹಂಚಿಕೆಗೆ ಲಭ್ಯವಿರುತ್ತದೆ.

M/s Karad Wind India Private Limited ಕಂಪನಿಯು ಹೊಸ ಇಂಧನ ನೀತಿ 2022-27ರಂತೆ 11 ಮೆ.ವ್ಯಾ. ಸಾಮರ್ಥ್ಯದ ಯೋಜನೆಗೆ ಅರ್ಜಿ ಹಾಗೂ 30% ಸಂಸ್ಕರಣಾ ಶುಲ್ಕವನ್ನು ಪಾವತಿಸಿರುತ್ತಾರೆ. ಬಾಕಿ ಉಳಿದ 70% ಸಂಸ್ಕರಣಾ ಶುಲ್ಕವನ್ನು ಹಂಚಿಕೆ ಆದೇಶ ಹೊರಡಿಸಿದ ನಂತರ ಕೆ.ಆರ್.ಇ.ಡಿ.ಎಲ್. ನಿಯಮಿತದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪೂರ್ವದಲ್ಲಿ ಸಂದಾಯ ಮಾಡಬೇಕಾಗಿರುತ್ತದೆ.

M/s Karad Wind India Private Limited ಕಂಪನಿಯು ದಿನಾಂಕ:24.08.2022 ರಂದು ಬೆಂಗಳೂರಿನಲ್ಲಿ ಸ್ಥಾಪಿತಗೊಂಡಿದ್ದು, ಸದರಿ ಕಂಪನಿಯು M/s SML Electricals India Private Limited ಕಂಪನಿಯ SPV ಸಂಸ್ಥೆಯಾಗಿರುತ್ತದೆ. M/s SML Electricals India Private Limited ಇವರ ನೆಟ್‌ವರ್ತ್ ದಿನಾಂಕ:31.03.2022ರ ಅಂತ್ಯಕ್ಕೆ ರೂ.284.48 ಕೋಟಿಗಳಾಗಿರುತ್ತದೆ ಎಂದು ಚಾರ್ಟೆಡ್ ಅಕೌಂಟೆಂಟ್ ದೃಢೀಕರಣ ಪತ್ರವನ್ನು ನೀಡಿರುತ್ತಾರೆ.

MD KREDL

AGM(W)

GM (Tech) KREDL

Wind Section
Inward No. 1636
Date 15/2/23
Sig.

ಮೇಲೆ ಓದಲಾದ (2)ರ ಹಂಚಿಕೆ ಸಮಿತಿ ಸಭೆಯಲ್ಲಿ M/s Karad Wind India Private Limited ಇವರು ಚಿತ್ರದುರ್ಗ ಜಿಲ್ಲೆಯ, ಚಿತ್ರದುರ್ಗ ಮತ್ತು ಹಿರಿಯೂರು ತಾಲ್ಲೂಕಿನ, ದೊಡ್ಡಸಿದ್ದವ್ವನಹಳ್ಳಿ, ಪಲ್ಲವನಹಳ್ಳಿ ಮತ್ತು ಕುರುಮರ್ಡಿಕೆರೆ ಗ್ರಾಮಗಳಲ್ಲಿ State Grid ವರ್ಗದಡಿಯಲ್ಲಿ ಹಂಚಿಕೆಗಾಗಿ ಕೋರಿರುವ 11 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸ್ಥಳವು ಕಂದಾಯ ಜಮೀನಾಗಿರುತ್ತದೆ. ಸದರಿಯವರು 11 ಮೆ.ವ್ಯಾ ಸಾಮರ್ಥ್ಯಕ್ಕೆ, 2 ಮೆ.ವ್ಯಾ ಸಾಮರ್ಥ್ಯದ 3 ವಿಂಡ್ ಟರ್ಬೈನ್, 1.25 ಮೆ.ವ್ಯಾ ಸಾಮರ್ಥ್ಯದ 2 ವಿಂಡ್ ಟರ್ಬೈನ್ ಹಾಗೂ 0.6 ಮೆ.ವ್ಯಾ ಸಾಮರ್ಥ್ಯದ 4 ವಿಂಡ್ ಟರ್ಬೈನ್ ನ್ನು ಅಳವಡಿಸುತ್ತಿದ್ದು, ಅಳವಡಿಸುವ ವಿಂಡ್ ಟರ್ಬೈನ್‌ಗಳಿಗೆ ಅಕ್ಷಾಂಶ ಮತ್ತು ರೇಖಾಂಶಗಳನ್ನು ನೀಡಿರುತ್ತಾರೆ. ಆದುದರಿಂದ ಸದರಿ ಅಭಿವೃದ್ದಿದಾರರು ಅಳವಡಿಸುವ ಪ್ರತಿ ಟರ್ಬೈನ್‌ಗೆ 04 ಎಕರೆಯಂತೆ ಒಟ್ಟು 36 ಎಕರೆ (9 Nos of WTG x 4 Acres = 36 Acres) ಜಮೀನನ್ನು ಮಾತ್ರ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ಟೋಪೋಶೀಟ್ ಸಂಖ್ಯೆ:57B/8 ರಲ್ಲಿ ಉಪಯೋಗಿಸಿಕೊಳ್ಳಬಹುದಾಗಿದೆ ಹಾಗೂ ಸದರಿಯವರು ಅಳವಡಿಸುವ ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ ಮಾರ್ಗಸೂಚಿಯಂತೆ (Micrositing Guidelines) ಅಳವಡಿಸಬೇಕಾಗಿರುತ್ತದೆ. ಆದ ಕಾರಣ ಯೋಜನೆಗೆ ಬೇಕಾಗುವ ಜಮೀನು ಪಡೆಯುವುದು ಮತ್ತು ಕೆಪಿಟಿಸಿಎಲ್‌ನಿಂದ Evacuation ನಿರಾಕ್ಷೇಪಣಾ ಪತ್ರ ಪಡೆಯುವುದು ಅಭಿವೃದ್ದಿದಾರರ ಜವಾಬ್ದಾರಿಯಾಗಿರುತ್ತದೆ. ಸದರಿಯವರು 11 ಮೆ.ವ್ಯಾ ಸಾಮರ್ಥ್ಯದಿಂದ ಉತ್ಪಾದಿಸುವ ವಿದ್ಯುತ್ತನ್ನು State Grid ವರ್ಗದಡಿಯಲ್ಲಿ KPTCL ನಿಯಮಿತದ 220/66/11kV Chitradurga ಸಬ್-ಸ್ಟೇಷನ್‌ಗೆ evacuate ಮಾಡುವುದಾಗಿ ತಿಳಿಸಿರುತ್ತಾರೆ.

ನಿರ್ದೇಶಕರು (ತಾಂತ್ರಿಕ), ಕೆಪಿಟಿಸಿಎಲ್ ಇವರು ಸದರಿ ಯೋಜನೆಗೆ 220/66/11kV Chitradurga ಸಬ್‌ಸ್ಟೇಷನ್‌ನಲ್ಲಿರುವ 2 x 100MVA ಟ್ರಾನ್ಸ್‌ಫಾರ್ಮರ್‌ಗಳನ್ನು 2 x 150MVA ಟ್ರಾನ್ಸ್‌ಫಾರ್ಮರ್‌ಗಳಿಗೆ ಬದಲಾಯಿಸಿದ ನಂತರ 220/66/11kV Chitradurga ಸಬ್-ಸ್ಟೇಷನ್‌ಗೆ Evacuation ನೀಡಬಹುದಾಗಿದೆ ಎಂದು ತಿಳಿಸಿದರು. ಸಮಿತಿಯು ಸದರಿ ಯೋಜನೆಯ 220/66/11kV Chitradurga KPTCL ನಿಯಮಿತದಿಂದ Evacuation ಮಾಡಲು ಕ್ರಮ ಕೈಗೊಳ್ಳಲು ನಿರ್ಣಯಿಸಿ, ಈ ಕೆಳಕಂಡ ಷರತ್ತುಗಳಿಗೊಳಪಟ್ಟು M/s Karad Wind India Private Limited ಇವರಿಗೆ ಚಿತ್ರದುರ್ಗ ಜಿಲ್ಲೆಯ, ಚಿತ್ರದುರ್ಗ ಮತ್ತು ಹಿರಿಯೂರು ತಾಲ್ಲೂಕುಗಳ ದೊಡ್ಡಸಿದ್ದವ್ವನಹಳ್ಳಿ, ಪಲ್ಲವನಹಳ್ಳಿ ಮತ್ತು ಕುರುಮರ್ಡಿಕೆರೆ ಗ್ರಾಮಗಳಲ್ಲಿ 11 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ನೀಡಲು ಸಮಿತಿಯು ಸರ್ವಾನುಮತಿಯಿಂದ ಶಿಫಾರಸ್ಸು ಮಾಡಿರುತ್ತದೆ.

i. ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮುಖಾಂತರ ಸ್ವಂತ ಬಳಕೆ/ಮೂರನೇ ವ್ಯಕ್ತಿಗೆ ಮಾರಾಟ ಮಾಡಲು.
ii. ಸದರಿ ಯೋಜನೆಗೆ 220/66/11kV Chitradurga ಸಬ್-ಸ್ಟೇಷನ್‌ಗೆ ಅಥವಾ evacuation ಲಭ್ಯವಿರುವ ಸಬ್-ಸ್ಟೇಷನ್‌ಗೆ KPTCL ನಿಯಮಿತದಿಂದ evacuation ಅನುಮತಿ ಪಡೆದು ಅನುಷ್ಠಾನಗೊಳಿಸುವುದು ಅಭಿವೃದ್ದಿದಾರರ ಜವಾಬ್ದಾರಿಯಾಗಿರುತ್ತದೆ.
iii. ಈಗಾಗಲೇ ಇತರೆ ಅಭಿವೃಧ್ದಿದಾರರುಗಳು ಹಂಚಿಕೆ/ತಾತ್ವಿಕ ಅನುಮೋದನೆಯನ್ನು ಪಡೆದಿರುವ ಪ್ರದೇಶದಲ್ಲಿ ಪ್ರಸ್ತಾಪಿತ ಯೋಜನೆಯ WTG Co-ordinates Overlap ಆಗಿದ್ದಲ್ಲಿ, ಅಂತಹ WTGs ಸಾಮರ್ಥ್ಯವು ರದ್ದುಗೊಳ್ಳುತ್ತದೆ.
iv. ಅಭಿವೃದ್ದಿದಾರರು ಸದರಿ ಯೋಜನೆಯನ್ನು RE Policy 2022-27 ರ ಪ್ರಕಾರ ಹಂಚಿಕೆ ಆದೇಶ ನೀಡಿದ ದಿನಾಂಕದಿಂದ 2 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಬೇಕಾಗುತ್ತದೆ.
v. ಹಂಚಿಕೆ ಆದೇಶ ನೀಡಿದ ದಿನಾಂಕದಿಂದ 45 ದಿನಗಳೊಳಗೆ ಪ್ರತೀ ಮೆ.ವ್ಯಾ ಗೆ ರೂ.5 ಲಕ್ಷದಂತೆ ನೆರವೇರಿಕೆ ಬ್ಯಾಂಕ್ ಖಾತರಿಯ ಜೊತೆಗೆ ಬಾಕಿ ಪಾವತಿಸಾಬೇಕಾಗಿರುವ 70% ಸಂಸ್ಕರಣಾ ಶುಲ್ಕವನ್ನು ಕ್ರೆಡೆಲ್ ಗೆ ಸಲ್ಲಿಸಿ ಒಡಂಬಡಿಕೆಯನ್ನು ಮಾಡಿಕೊಳ್ಳಬೇಕಾಗಿರುತ್ತದೆ.